ಓ ಎಸ್ ನಂ. 24/2015
ಪಿ ಡಬ್ಲ್ಯೂ: 1
ದಿನಾಂಕ 15-07-2023 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು: 2, 4(ಎ) ಮತ್ತು (ಬಿ) ಪ್ರತಿವಾದಿ ಪರ: ಶ್ರೀ ಕೆ ಎಲ್ ಡಿ ವಕೀಲರಿಂದ:

ನನ್ನ ಮದುವೆಯ ಖರ್ಚಿಗಾಗಿ ನನ್ನ ತಂದೆ ಆಸ್ತಿಯನ್ನು ನೊಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಿಕೊಟ್ಟಿದ್ದು, ಸದರಿ ವಿಚಾರವನ್ನು ಕ್ರಯಪತ್ರದಲ್ಲಿ ನಮೂದಿಸಿರುತ್ತಾರೆ ಎಂದರೆ ಸರಿಯಲ್ಲ. ಸರಸ್ವತಿ ಪುರ ಗ್ರಾಮ ಪಂಚಾಯಿತಿ 504 ಆಸ್ತಿಯನ್ನು ನನ್ನ ಮದುವೆಗೆ ಸಂಬಂದ ಮಾರಿದ್ದು, ಸದರಿ ಆಸ್ತಿಯನ್ನು ಉದ್ದೇಶಪೂರ್ವಕವಾಗಿ ಆ ಸ್ವತ್ತನ್ನು ದಾವೆಗೆ ಸೇರಿಸಿಲ್ಲ ಎಂದರೆ ಸರಿಯಲ್ಲ. ಪಾಲುಪಟ್ಟಿಯಾದ ನಂತರ ಅವರವರ ಹಿಸ್ಸೆಗೆ ಬಂದ ಆಸ್ತಿಗಳನ್ನು ಅವರವರೇ ಸ್ವಾಧೀನದಲ್ಲಿದ್ದು ಅನುಭವಿಸುತ್ತಿದ್ದಾರೆ ಎಂದರೆ ಸರಿಯಲ್ಲ. ನಿಪಿ-86 ರಂತೆ ಅವರವರ ಹೆಸರಿಗೆ ಖಾತೆ ಬಂದಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆ ಯಾವುದೇ ಆಸ್ತಿಯನ್ನು ವಿಭಾಗ ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಚಂದ್ರಪ್ಪನವರಿಗೆ ಸರ್ವೆ ನಂ.60/ಪಿ ರಲ್ಲಿ 1 ಎಕರೆ 11 ಗುಂಟೆ, ಸರ್ವೆ ನಂ.69/2 ಪಿ ರಲ್ಲಿ 32 ಗುಂಟೆ, ಸರ್ವೆ ನಂ.92/2 ಪಿ ರಲ್ಲಿ 12 ಗುಂಟೆ ಜಮೀನು ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ತಿಮ್ಮರಾಯಪ್ಪನವರ ಹೆಸರಿಗೆ ಸರ್ವೆ ನಂ.60/ಪಿರಲ್ಲಿ 1 ಎಕರೆ 14 ಗುಂಟೆ, ಸರ್ವೆ ನಂ.68/1 ಪಿ ರಲ್ಲಿ 20 ಗುಂಟೆ, ಸರ್ವೆ ನಂ.69/2 ಪಿ ರಲ್ಲಿ 1

ಎಕರೆ 7 ಗುಂಟೆ, ಸರ್ವೆ ನಂ.192/2 ಪಿ ರಲ್ಲಿ 25 ಗುಂಟೆ ಹಿಸ್ಸೆಗೆ ಬಂದಿದೆ ಎಂದರೆ ಸರಿಯಲ್ಲ.

ಪಾಲುಪಟ್ಟಿಗೂ ದಾವಾ ಆಸ್ತಿಗಳಿಗೂ ಸಂಬಂದ ಇದೆಯೋ ಇಲ್ಲವೋ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲ, ನಾನು ನನ್ನ ತಂದೆಯ ಆಸ್ತಿಯಲ್ಲಿ ವಿಭಾಗ ಕೋರಿ ದಾವೆ ಸಲ್ಲಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಪಾಲುಪಟ್ಟಿಯಂತೆ ಅಂದಿನಿಂದಲೂ ಅವರವರ ಹೆಸರಿಗೆ ಖಾತೆ ಬಂದಿದ್ದು ಅವರವರೇ ಸ್ವಾಧೀನ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-88 ಕ್ಕೂ ಪಾಲುಪಟ್ಟಿಗೂ ಸಂಬಂದ ಇದೆ ಎಂದರೆ ಸರಿಯಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಬಿ ಶೆಡ್ಯೂಲ್ ಆಸ್ತಿಗಳು ಮೂಲತಃ ಪಾಲುಪಟ್ಟಿಯಿಂದ ಅವರವರ ಹೆಸರಿಗೆ 2006 ರಲ್ಲಿ ಬಂದಿರುವ ಆಸ್ತಿಗಳು ಎಂದರೆ ಸರಿಯಲ್ಲ. ಈಗಾಗಲೇ ವಿಭಾಗ ಆಗಿರುವ ಸ್ವತ್ತುಗಳನ್ನು ನಾನು ದಾವೆಗೆ ಸೇರಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಬಗ್ಗೆ ನನಗೆ ಗೊತ್ತಿಲ್ಲದೆ ಇದ್ದರೂ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ದಾವಾ ಆಸ್ತಿಗಳಲ್ಲಿ ಯಾರ ಯಾರ ಹಿಸ್ಸೆಗೆ ಯಾವ ಆಸ್ತಿ ಬಂದಿದೆಯೋ ಅವುಗಳಿಗೆ ಅವರವರೇ ಕಂದಾಯ ಕಟ್ಟುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಯಾವ ಸರ್ವೆ ನಂಬರಿನಲ್ಲಿ ಅಡಿಕೆ ಮತ್ತು ತೆಂಗು ಬೆಳೆ ಇದೆ ಎಂದು ನನಗೆ ಹೇಳಲು ಬರುವುದಿಲ್ಲ. ದಾವಾ ಆಸ್ತಿಗಳನ್ನು ಅಭಿವೃದ್ದಿ ಪಡಿಸಲು ಪ್ರತಿವಾದಿಗಳು ಬ್ಯಾಂಕಿನಲ್ಲಿ ಸಾಲವನ್ನು ಪಡೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ

ಮುಂದುವರೆದು ನನ್ನ ತಂದೆ ಜಮೀನುಗಳನ್ನು ಅಭಿವೃದ್ಧಿ ಪಡಿಸಿರುತ್ತಾರೆ ಎಂದು ನುಡಿದಿರುತ್ತಾರೆ. ದಾವಾ ಆಸ್ತಿಗಳಲ್ಲಿ ಕೆಲವು ಆಸ್ತಿಗಳನ್ನು ದಾವೆ ಸಲ್ಲಿಸಿದ ನಂತರ ಮಾರಾಟವಾಗಿದೆ ಎಂದರೆ ಸರಿಯಲ್ಲ. ನನ್ನ ತಂದೆ ಬದುಕಿದ್ದಾಗಲೆ ಕೆಲವು ದಾವಾ ಆಸ್ತಿಗಳು ಮಾರಾಟವಾಗಿದೆ ಎಂದರೆ ಸರಿಯಲ್ಲ.

ದಾವಾ ಆಸ್ತಿಗಳಲ್ಲಿ ಕೆಲವು ಆಸ್ತಿಗಳನ್ನು ನನ್ನ ತಂದೆ ಮಾರಾಟ ಮಾಡಿದ್ದು ಆ ಸ್ವತ್ತುಗಳನ್ನು ದಾವಾ ಆಸ್ತಿಗಳಲ್ಲಿ ಸೇರಿಸಿಲ್ಲ ಮತ್ತು ಖರೀದಿಸಿದವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ಪ್ರತಿವರ್ಷ ನನ್ನನ್ನು ತವರು ಮನೆಗೆ ಕರೆಯಿಸಿ ನನಗೆ ಉಡುಗೊರೆ ಕೊಟ್ಟು ಗೌರವ ನೀಡುತ್ತಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮನೆಗೆ ಕರೆಸಿಲ್ಲ, ಅವರೇ ನನ್ನ ಮನೆಗೆ ಬಂದು ಅರಿಶಿನ ಕುಂಕುಮ ಕೊಟ್ಟು ಹೋಗುತ್ತಾರೆ ಎಂದು ನುಡಿದಿರುತ್ತಾರೆ. ನಾನು ದಾವಾ ಆಸ್ತಿಗಳಲ್ಲಿ ಎಂದಿಗೂ ವಿಭಾಗ ಕೇಳಿಲ್ಲ ಮತ್ತು ಪಂಚಾಯಿತಿ ಮಾಡಿಸಿಲ್ಲ ಎಂದರೆ ಸರಿಯಲ್ಲ. ನಾನು ಏಕಾಏಕಿ ಬಂದು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. 1 ರಿಂದ 3ನೇ ಪ್ರತಿವಾದಿಗಳು ಬದುಕಿರುವಾಗಲೂ ನಾನು ಆಸ್ತಿಗಳಲ್ಲಿ ವಿಭಾಗ ಕೇಳಿಲ್ಲ ಎಂದರೆ ಸರಿಯಲ್ಲ. ನಾಗರಾಜು ರವರು ಬದುಕಿದ್ದಾಗ ನಾನು ಆಸ್ತಿಗಳಲ್ಲಿ ವಿಭಾಗ ಕೇಳಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ತಂದೆ ಬದುಕಿದ್ದಾಗಲೂ ಆಸ್ತಿಗಳಲ್ಲಿ ವಿಭಾಗ ಕೇಳಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ., ಕಡೂರು.